ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್–585226

ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, (ದ.ಕ.)

# ಕೃಷಿ ಸಂಜೀವಿನಿ

ದೂರವಾಣಿ ಸಂಖ್ಯೆ: 0824: 2431872, 8762543060

e-mail: kvk.DakshinaKannada@icar.gov.in, kvkdk@rediffmail.com, kvkdkmlr@gmail.com, Web: kvkdk.org

ಸಂಚಿಕೆ: 01 ಜುಲೈ–ಸೆಪ್ಟೆಂಬರ್–2022 ಇ–ವಾರ್ತಾ ಪತ್ರಿಕೆ ಸಂಪುಟ–2

## ಮಣ್ಣು ಉಳಿಸಿ ಅಭಿಯಾನ

ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ಹಾಗೂ ಈಶಾ ಫೌಂಡೇಶನ್‌ನ ಸ್ವಯಂ ಸೇವಕರ ಸಹಯೋಗದೊಂದಿಗೆ 'ಮಣ್ಣು ಉಳಿಸಿ ಅಭಿಯಾನ' ವನ್ನು 8 ನೇ ಜುಲೈ 2022 ರಂದು ಕೆವಿಕೆಯ ಸಭಾಭವನದಲ್ಲಿ ಹಾಗೂ 15ನೇ ಆಗಸ್ಟ್ 2022 ರಂದು ಮೀನುಗಾರಿಕೆ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಯಿತು. ಮಣ್ಣಿನ ಸಂರಕ್ಷಣೆಗಾಗಿ ವಿಶ್ವದಾದ್ಯಂತ ಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ಮಣ್ಣಿನ ಬಿಕ್ಕಟ್ಟನ್ನು ಪರಿಹರಿಸುವ ಸಲುವಾಗಿ, ಸದ್ಗುರುಗಳಾದ ಜಗ್ಗಿ ವಾಸುದೇವ್ ಬಾಬಾ ಅವರು ಪ್ರಾರಂಭಿಸಿದ ಜಾಗತಿಕ ಆಂದೋಲನವೇ 'ಮಣ್ಣು ಉಳಿಸಿ ಅಭಿಯಾನ', ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಟಿ ಜೆ ರಮೇಶ ಅವರು ಮಾತನಾಡಿ, ಮಣ್ಣಿನ ಫಲವತ್ತತೆ ಕಾಪಾಡಲು ಸಮಗ್ರ ಪೋಷಕಾಂಶ ನಿರ್ವಹಣೆ ಹಾಗೂ ಮಣ್ಣು ಸಂರಕ್ಷಣಾ ಪದ್ಧತಿಗಳನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು. ಮುಂದಿನ ಪೀಳಿಗೆಗಾಗಿ ಮಣ್ಣಿನ ಸಂರಕ್ಷಣೆಯ ಧ್ಯೇಯದಿಂದ ಸೈಕಲ್ ಮೂಲಕ ದೇಶಾದ್ಯಂತ 25 ಸಾವಿರ ಕಿ. ಮೀ. ಕ್ರಮಿಸಿ ಜಾಗೃತಿ ಮೂಡಿಸುತ್ತಿರುವ ಹದಿನಾರು ವರ್ಷದ ಸಾಹಿಲ್ ಝಾ ಅವರನ್ನು ಮೀನುಗಾರಿಕೆ ಕಾಲೇಜಿನ ಡೀನ್ ಪ್ರೊಫೆಸರ್ ಶಿವಕುಮಾರ್ ಮಗದ ಇವರು ಈ ಸಂದರ್ಭದಲ್ಲಿ ಸನ್ಮಾನಿಸಿದರು. ಈಶಾ ಫೌಂಡೇಶನ್‌ನ ಹಠಯೋಗ ಶಿಕ್ಷಕ ಪ್ರವೀಣ್ ಕುಮಾರ, ಮಣ್ಣಿನ ಮಹತ್ವ ಹಾಗೂ ಅದರ ಸಂರಕ್ಷಣೆ ಕುರಿತು ಮಾತನಾಡಿದರು. ನಂತರ ಕಾರ್ಯಕ್ರಮಗಳನ್ನು ಸಂಯೋಜಿಸಿದ, ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಡಾ. ಮಲ್ಲಿಕಾರ್ಜುನ ಎಲ್. ಭೂಮಿಯ ಮೇಲಿನ ಸುಸ್ಥಿರ ಜೀವನಕ್ಕಾಗಿ, ಮಣ್ಣಿನ ಉತ್ಪಾದಕತೆ ಮಹತ್ವ ಹಾಗೂ ಅದರ ರಕ್ಷಣೆ ಕುರಿತು ಮಾತನಾಡಿದರು. ಪಶು ವಿಜ್ಞಾನಿ ಡಾ. ಶಿವಕುಮಾರ ಆರ್., ಸಸ್ಯ ಸಂರಕ್ಷಣಾ ವಿಜ್ಞಾನಿ ಡಾ. ಕೇದಾರನಾಥ, ತೋಟಗಾರಿಕಾ ವಿಜ್ಞಾನಿ ಡಾ. ರಶ್ಮಿ, ಸಿಬ್ಬಂದಿಗಳು, 95 ರೈತರು, ರೈತ ಮಹಿಳೆಯರು ಹಾಗೂ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.








## ಪೆಟ್ರೋಲಿಯಮ್ ಉತ್ಪನ್ನಗಳ ಸಂರಕ್ಷಣೆ ಹಾಗೂ ಇಂಧನ ದಕ್ಷ ಪಂಪ್‌ಗಳ ಜಾಗೃತಿ ಕಾರ್ಯಕ್ರಮ

ಭಾ.ಕೃ.ಅ.ಪ. ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ, ಪೆಟ್ರೋಲಿಯಮ್ ಉತ್ಪನ್ನಗಳ ಸಂರಕ್ಷಣೆ ಹಾಗೂ ಇಂಧನ ದಕ್ಷ ಪಂಪ್‌ಗಳ ಜಾಗೃತಿಯ ಕುರಿತು ಒಂದು ದಿನದ ಕೃಷಿ ಕಾರ್ಯಗಾರಗಳನ್ನು ದಿನಾಂಕ 21.07.2022 ರಂದು ಉಳ್ಳಾಲ ತಾಲೂಕಿನ ಪಾವೂರು ಗ್ರಾಮದಲ್ಲಿ ಹಾಗೂ ದಿನಾಂಕ 10.08.2022 ರಂದು ಬೆಳ್ತಂಗಡಿ ತಾಲೂಕಿನ ಕಲ್ಲೇರಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು. ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಡಾ. ಮಲ್ಲಿಕಾರ್ಜುನ ಎಲ್. ಕಾರ್ಯಕ್ರಮಗಳನ್ನು ಸಂಯೋಜಿಸಿ, ಕೃಷಿಯಲ್ಲಿ ಇಂಧನ ದಕ್ಷ ಪಂಪ್‌ಗಳ ಬಳಕೆ, ಇಂಧನ ಉಳಿತಾಯಕ್ಕಾಗಿ ವಿದ್ಯುತ್ ಉಪಕರಣಗಳನ್ನು ಖರೀದಿಸುವಾಗ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ವಾಹನ ಚಲಾಯಿಸುವಾಗ ಹಾಗೂ ಅಡುಗೆ ತಯಾರಿಸುವಾಗ ಅನುಸರಿಸಬೇಕಾದ ಸರಳ ವಿಧಾನಗಳ ಕುರಿತು ವಿವರಿಸಿದರು. ಪಶು ವಿಜ್ಞಾನಿ ಡಾ. ಶಿವಕುಮಾರ ಆರ್., ಭಾರತೀಯ ವಿಕಾಸ ಟ್ರಸ್ಟ್ ನ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಜೀವನ್ ಕೊಲ್ಯ 82 ರೈತರು, ಹಾಗೂ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.








## ಭತ್ತದಲ್ಲಿ ಮೆಗ್ನೀಷಿಯಂ ಸಲ್ಫೇಟ್‌ನ ಬಳಕೆ ಕುರಿತು ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ

ಭಾ.ಕೃ.ಅ.ಪ. ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ, ಭತ್ತದಲ್ಲಿ ಮೆಗ್ನೀಷಿಯಂ ಸಲ್ಫೇಟ್‌ನ ಬಳಕೆ ಕುರಿತು ಒಂದು ದಿನದ ಹೊರಾಂಗಣ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ದಿನಾಂಕ 01.09.2022 ರಂದು ಬೆಳ್ತಂಗಡಿ ತಾಲೂಕಿನ ಬಡಗ ಕಾರಂದೂರು ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು. ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಡಾ. ಮಲ್ಲಿಕಾರ್ಜುನ ಎಲ್. ಕಾರ್ಯಕ್ರಮವನ್ನು ಸಂಯೋಜಿಸಿ, ಭತ್ತದ ಬೆಳವಣಿಗೆ ಮತ್ತು ಗುಣಮಟ್ಟದ ಇಳುವರಿಯ ಮೇಲೆ ಮೆಗ್ನೀಷಿಯಂ ಹಾಗೂ ಸಲ್ಫೇಟ್‌ನ ಪ್ರಭಾವದ ಕುರಿತು ತಿಳಿಸಿದರು. ಈ ತಂತ್ರಜ್ಞಾನವನ್ನು ಜನಪ್ರಿಯಗೊಳಿಸಲು ಆಯ್ದ ಐದು ರೈತರ ಗದ್ದೆಗಳಲ್ಲಿ ಕ್ಷೇತ್ರ ಪ್ರಯೋಗ ಪರಿಶೀಲನೆಯನ್ನು ಕೈಗೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಪಶು ವಿಜ್ಞಾನಿ ಡಾ. ಶಿವಕುಮಾರ ಆರ್., 20 ರೈತರು ಹಾಗೂ ರೈತ ಮಹಿಳೆಯರು ಉಪಸ್ಥಿತರಿದ್ದರು.

## ಕರಾವಳಿ ಪ್ರದೇಶದ ಭತ್ತದಲ್ಲಿ ಪೊಟ್ಯಾಷಿಯಂ ಪೋಷಕಾಂಶದ ನಿರ್ವಹಣೆ

ಭಾ.ಕೃ.ಅ.ಪ. ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ, ಕರಾವಳಿ ಪ್ರದೇಶದ ಭತ್ತದಲ್ಲಿ ಪೊಟ್ಯಾಷಿಯಂ ಪೋಷಕಾಂಶದ ನಿರ್ವಹಣೆ ಕುರಿತು ಒಂದು ದಿನದ ಹೊರಾಂಗಣ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ದಿನಾಂಕ 12.09.2022 ರಂದು ಪುತ್ತೂರು ತಾಲೂಕಿನ ಹಿರೇಬಂಡಾಡಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು. ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಡಾ. ಮಲ್ಲಿಕಾರ್ಜುನ ಎಲ್. ಕಾರ್ಯಕ್ರಮವನ್ನು ಸಂಯೋಜಿಸಿ, ಭತ್ತದ ಬೆಳವಣಿಗೆ ಮತ್ತು ಗುಣಮಟ್ಟದ ಇಳುವರಿಯ ಮೇಲೆ ಪೊಟ್ಯಾಷಿಯಂ ಪೋಷಕಾಂಶದ ಪ್ರಯೋಜನದ ಕುರಿತು ಮಾಹಿತಿ ನೀಡಿದರು. ಈ ತಂತ್ರಜ್ಞಾನವನ್ನು ಜನಪ್ರಿಯಗೊಳಿಸಲು ಆಯ್ದ ಹತ್ತು ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ತೋಟಗಾರಿಕಾ ವಿಜ್ಞಾನಿ ಡಾ. ರಶ್ಮಿ, ಆರ್., 28 ರೈತರು ಹಾಗೂ ರೈತ ಮಹಿಳೆಯರು ಉಪಸ್ಥಿತರಿದ್ದರು.

## ಭತ್ತದಲ್ಲಿ ಪರಿಸರ ಸ್ನೇಹಿ ಪೀಡೆಗಳ ನಿರ್ವಹಣೆ

ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿಯಲ್ಲಿ ಅವರ ತಾಂತ್ರಿಕ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ರೈತರಿಗೆ ಉತ್ತಮ ಸೇವೆ ಸಲ್ಲಿಸಲು ಅನುಕೂಲವಾಗುವಂತೆ ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ ಮಂಗಳೂರು, ಇವರು ಭತ್ತದಲ್ಲಿ ಪರಿಸರ ಸ್ನೇಹಿ ಪೀಡೆಗಳ ನಿರ್ವಹಣೆ ಕುರಿತು ತರಬೇತಿ ಹಾಗೂ ಪದ್ಧತಿ ಪ್ರಾತ್ಯಕ್ಷಿಕೆಯನ್ನು ದಿನಾಂಕ 12.08.2022 ರಂದು ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಡಾ. ಕೇದಾರನಾಥ, ವಿಜ್ಞಾನಿಗಳು ಮತ್ತು ದೇಸಿ ಸಂಚಾಲಕರು ಕೆವಿಕೆ ಮಂಗಳೂರು ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಕೃಷಿ ಪರಿಕರ ಮಾರಾಟಗಾರರಿಗೆ ಭತ್ತದಲ್ಲಿ ಕೀಟ ಮತ್ತು ರೋಗರಹಿತ ಬೀಜಗಳ ಆಯ್ಕೆ, ಸೂಕ್ಷ್ಮಾಣು ಜೀವಿಗಳಾದ ಸೂಡೋಮೊನಾಸ್ ಫ್ಲೂರೆಸೆನ್ಸ್ ಮತ್ತು ಟ್ರೈಕೋಡರ್ಮಾದಿಂದ @ 10 ಗ್ರಾಂ ದಿಂದ ಬೀಜ ಮತ್ತು ಬೇರುಗಳ ಉಪಚಾರ, ತುದಿ ಕತ್ತರಿಸುವಿಕೆ ಮತ್ತು ಮೋಹಕ ಬಲೆಗಳ ಅಳವಡಿಕೆ ಕುರಿತು ಮಾಹಿತಿಯನ್ನು ನೀಡಿದರು. ಒಟ್ಟು 38 ದೇಸಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.





## ತೋಟಗಾರಿಕೆ ಬೆಳೆಗಳಲ್ಲಿ ಕೀಟ ಮತ್ತು ರೋಗ ಲಕ್ಷಣಗಳ ಗುರುತಿಸುವಿಕೆ

ಬೆಳೆಗಳ ಉತ್ಪಾದನೆಯಲ್ಲಿ ಸಸ್ಯ ರೋಗ ಮತ್ತು ಕೀಟಗಳ ನಿರ್ವಹಣೆ ಪ್ರಮುಖ ಪಾತ್ರವಹಿಸುತ್ತದೆ, ಈ ಕಾರ್ಯಕ್ರಮದಲ್ಲಿ ಕೆವಿಕೆಯ ವಿಜ್ಞಾನಿಗಳಾದ ಡಾ. ಕೇದಾರನಾಥ ರವರು ತೆಂಗು, ಅಡಿಕೆ, ಕರಿಮೆಣಸು, ಗೇರು ಮತ್ತು ಮಾವು ಬೆಳೆಗಳಲ್ಲಿ ರೋಗ ಮತ್ತು ಕೀಟ ಬಾಧೆಯ ಲಕ್ಷಣಗಳ ಗುರುತಿಸುವಿಕೆ ಕುರಿತು ಪರಿಕರ ಮಾರಾಟಗಾರರಿಗೆ ದಿನಾಂಕ 22.07.2022 ಮತ್ತು 25.07.2022 ರಂದು ಪದ್ಧತಿ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಒಟ್ಟು 76 ದೇಸಿ ಕೃಷಿ ಪರಿಕರ ಮಾರಾಟಗಾರರು ಭಾಗವಹಿಸಿದರು.





## ಸಸ್ಯಗಳ ಆರೋಗ್ಯ ರಕ್ಷಿಸುವಲ್ಲಿ ಬೀಜೋಪಚಾರದ ಪ್ರಾಮುಖ್ಯತೆ

ಬೀಜ ಮತ್ತು ಮಣ್ಣಿನಿಂದ ಹರಡುವ ಕೀಟ ಮತ್ತು ರೋಗಗಳು ಬೀಜದ ಮೊಳಕೆಯೊಡೆಯುವಿಕೆ ಮತ್ತು ಬೆಳೆಯ ಬೆಳವಣಿಗೆ ಮೇಲೆ ಪರಿಣಾಮ ಬೀರುವುದನ್ನು ತಡೆಗಟ್ಟುವುದರಲ್ಲಿ ಬೀಜೋಪಚಾರವು ಪ್ರಮುಖ ಪಾತ್ರವಹಿಸುತ್ತದೆ. ಈ ನಿಟ್ಟಿನಲ್ಲಿ ರೈತರಿಗೆ ಸಹಕಾರಿಯಾಗಲೆಂದು ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ದಿನಾಂಕ 22.07.2022 ರಂದು ಕೃಷಿ ಪರಿಕರ ಮಾರಾಟಗಾರರಿಗೆ ಬೀಜೋಪಚಾರದ ಕುರಿತು ಪದ್ಧತಿ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಡಾ. ಕೇದಾರನಾಥ, ವಿಜ್ಞಾನಿಗಳು ಮತ್ತು ದೇಸಿ ಸಂಚಾಲಕರು ಕೆವಿಕೆ ಮಂಗಳೂರು ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿಯಲ್ಲಿ ಆರೋಗ್ಯಕರ ಬೀಜಗಳ ಆಯ್ಕೆ, ಬೀಜ ಸಂಸ್ಕರಣೆ ಮತ್ತು ಬೀಜ ಸಂಸ್ಕರಣೆಯ ಸಮಯದಲ್ಲಿ ಅಳವಡಿಸಿಕೊಳ್ಳಬೇಕಾದ ವಿಧಾನಗಳು ಮತ್ತು ಬೀಜೋಪಚಾರ ವಿಧಾನಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಒಟ್ಟು 38 ದೇಸಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.




## ಕೃಷಿಯಲ್ಲಿ ಟ್ರೈಕೋಡರ್ಮಾ ಉಪಚರಿಸಿದ ಎರೆಹುಳು ಗೊಬ್ಬರದ ಪ್ರಾಮುಖ್ಯತೆ

ಟ್ರೈಕೋಡರ್ಮಾವು ಸಸ್ಯಗಳ ಬೆಳವಣಿಗೆಯ ಪ್ರವರ್ತಕ ಮತ್ತು ಮಿಶ್ರಗೊಬ್ಬರ ಸಾಮರ್ಥ್ಯವನ್ನು ಸುಧಾರಿಸುವುದರ ಜೊತೆಗೆ ಪ್ರಬಲವಾದ ಶಿಲೀಂಧ್ರನಾಶಕವಾಗಿ ಕೃಷಿಯಲ್ಲಿ ವಿಶೇಷ ಸ್ಥಾನವನ್ನು ಹೊಂದಿದೆ. ಬೀಜ ಮತ್ತು ಮಣ್ಣಿನಿಂದ ಹರಡುವ ಕೀಟ ಮತ್ತು ರೋಗಗಳು ಬೀಜದ ಮೊಳಕೆಯೊಡೆಯುವಿಕೆ ಮತ್ತು ಬೆಳೆಯ ಬೆಳವಣಿಗೆ ಮೇಲೆ ಪರಿಣಾಮ ಬೀರುವುದನ್ನು ತಡೆಗಟ್ಟುವುದರಲ್ಲಿ ಬೀಜೋಪಚಾರವು ಪ್ರಮುಖ ಪಾತ್ರವಹಿಸುತ್ತದೆ. ಈ ನಿಟ್ಟಿನಲ್ಲಿ ರೈತರಿಗೆ ಸಹಕಾರಿಯಾಗಲೆಂದು ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ದಿನಾಂಕ 22.07.2022 ರಂದು ಕೃಷಿ ಪರಿಕರ ಮಾರಾಟಗಾರರಿಗೆ ಎರೆಹುಳು ಗೊಬ್ಬರಕ್ಕೆ ಟ್ರೈಕೋಡರ್ಮಾವನ್ನು ಉಪಚರಿಸುವ ಕುರಿತು ಪದ್ಧತಿ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಡಾ. ಕೇದಾರನಾಥ, ವಿಜ್ಞಾನಿಗಳು ಮತ್ತು ದೇಸಿ ಸಂಚಾಲಕರು ಕೆವಿಕೆ ಮಂಗಳೂರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿಯಲ್ಲಿ ಟ್ರೈಕೋಡರ್ಮಾ ಉಪಚರಿಸಿದ ಎರೆಹುಳು ಗೊಬ್ಬರದ ಪ್ರಾಮುಖ್ಯತೆ ಕುರಿತು ಮಾಹಿತಿಯನ್ನು ನೀಡಿದರು. ಒಟ್ಟು 38 ದೇಸಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.





## ಸಮಸ್ಯಾತ್ಮಕ ಕ್ಷೇತ್ರಗಳ ಭೇಟಿ

ಭತ್ತವು ಭಾರತ ದೇಶದ ಪ್ರಮುಖ ಆಹಾರ ಬೆಳೆ. ಕೀಟ ಮತ್ತು ರೋಗಗಳ ತೀವ್ರತೆಯು ಬೆಳೆ ಬೆಳವಣಿಗೆ ಮತ್ತು ಹವಾಮಾನದ ಮೇಲೆ ಅವಲಂಭಿತವಾಗಿರುತ್ತದೆ. ಈ ಕೀಟ ಮತ್ತು ರೋಗ ಬಾಧಿತ ರೈತರ ಭತ್ತದ ಕ್ಷೇತ್ರಗಳಿಗೆ ವಿಜ್ಞಾನಿಗಳ ಭೇಟಿಯನ್ನು ಆತ್ಮ ಯೋಜನೆ ಕೃಷಿ ಇಲಾಖೆ ದಕ್ಷಿಣ ಕನ್ನಡ ಮತ್ತು ಕೃಷಿ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ದಿನಾಂಕ 13.07.2022 ರಂದು ಹಮ್ಮಿಕೊಳ್ಳಲಾಗಿತ್ತು. ಡಾ. ಕೇದಾರನಾಥ, ವಿಜ್ಞಾನಿಗಳು ಕೆವಿಕೆ ಮಂಗಳೂರು ರವರು ಭಾಗವಹಿಸಿ ಭತ್ತದಲ್ಲಿ ಕಂಡು ಬರುವ ಎಲೆ ಮಡಿಸುವ ಹುಳು, ಕಾಂಡ ಕೊರಕ, ಕೊಳವೆ ಹುಳುವಿನ ಹಾಗೂ ಬೆಂಕಿ ರೋಗದ ಲಕ್ಷಣಗಳು, ಅದರ ಗುರುತಿಸುವಿಕೆ ಮತ್ತು ಸಮಗ್ರ ನಿರ್ವಹಣೆ ಕುರಿತು ಮಾಹಿತಿಯನ್ನು ನೀಡಿದರು. ಡಾ. ಮಲ್ಲಿಕಾರ್ಜುನ್ ಎಲ್., ಮಣ್ಣು ವಿಜ್ಞಾನಿಗಳು ಭಾಗವಹಿಸಿ ಮಣ್ಣು ಪರೀಕ್ಷೆ ಮತ್ತು ಪೋಷಕಾಂಶಗಳ ಬಳಕೆ ಕುರಿತು ಮಾಹಿತಿಯನ್ನು ನೀಡಿದರು. ಶ್ರೀ ಬರಮಣ್ಣ, ಸಹಾಯಕ ಕೃಷಿ ಅಧಿಕಾರಿಗಳು ಉಪ್ಪಿನಂಗಡಿ ಮತ್ತು ಬಂಟ್ವಾಳ, ಶ್ರೀ ಪ್ರದೀಪ ಡಿಸೋಜಾ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬಂಟ್ವಾಳ ಮತ್ತು ಆತ್ಮ ಯೋಜನೆಯ ಆಧಿಕಾರಿಗಳು ಭಾಗವಹಿಸಿದ್ದರು.





## ದೇಸಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ ಮಂಗಳೂರು, ಸಮೇತಿ (ದಕ್ಷಿಣ), ಜಿಕೆವಿಕೆ ಬೆಂಗಳೂರು, ಮ್ಯಾನೇಜ್, ಹೈದ್ರಾಬಾದ್ ಹಾಗೂ ಕೃಷಿ ಇಲಾಖೆ ದಕ್ಷಿಣ ಕನ್ನಡ ಇವರುಗಳ ಪ್ರಾಯೋಜಿತ ಕಾರ್ಯಕ್ರಮದಡಿಯಲ್ಲಿ ದೇಸಿ ವಿದ್ಯಾರ್ಥಿಗಳಿಗೆ ಕೇಂದ್ರಿಯ ತೋಟಗಾರಿಕೆ ಬೆಳೆಗಳ ಸಂಶೋಧನಾ ಕೇಂದ್ರ ಕಾಸರಗೋಡುಗೆ ಶೈಕ್ಷಣಿಕ ಪ್ರವಾಸವನ್ನು ದಿನಾಂಕ 20.08.2022 ಮತ್ತು 23.09.2022 ರಂದು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಡಾ. ಪ್ರತೀಬಾ, ವಿ, ಹೆಚ್., ಮತ್ತು ಡಾ. ರಜೀನಿ, ಟಿ. ಎನ್., ವಿಜ್ಞಾನಿಗಳು ಸಿ.ಪಿ.ಸಿಆರ್.ಐ. ಕಾಸರಗೋಡು ರವರು ಕೇಂದ್ರದ ಪ್ರಾತ್ಯಕ್ಷಿಕೆಗಳು ಮತ್ತು ತಂತ್ರಜ್ಞಾನಗಳ ಬಗ್ಗೆ ಮಾಹಿತಿ ನೀಡಿದರು. ಡಾ. ಕೇದಾರನಾಥ, ಶೈಕ್ಷಣಿಕ ಪ್ರವಾಸವನ್ನು ಆಯೋಜಿಸಿದರು. ಒಟ್ಟು 76 ದೇಸಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.





## ತೋಟಗಾರಿಕೆ ವಿದ್ಯಾರ್ಥಿಗಳಿಗೆ ಇಂಟರ್ನಸಿಪ್ ತರಬೇತಿ ಕಾರ್ಯಕ್ರಮ

ಭಾ.ಕೃ.ಅ.ಪ– ಕೃಷಿ ವಿಜ್ಞಾನ ಕೇಂದ್ರ (ದ.ಕ) ಮಂಗಳೂರು, ತೋಟಗಾರಿಕೆ ಮಹಾವಿದ್ಯಾಲಯ ಮೂಡಿಗೆರೆ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ ಶಿವಮೊಗ್ಗ ರವರ ಸಹಯೋಗದಲ್ಲಿ ಬಿ.ಎಸ್ಸಿ (ತೋಟಗಾರಿಕೆ) ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಇಂಟರ್ನಸಿಪ್ ತರಬೇತಿ ಕಾರ್ಯಕ್ರಮವನ್ನು ದಿನಾಂಕ 22.08.2022 ರಿಂದ 03.09.2022 ರ ವರೆಗೆ ಕೆ.ವಿ.ಕೆ ಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಡಾ. ಕೇದಾರನಾಥ, ವಿಜ್ಞಾನಿಗಳು ಕೆ.ವಿ.ಕೆ. ಮಂಗಳೂರು ರವರು ಸಂಯೋಜಿಸಿದರು. ಈ ಕಾರ್ಯಕ್ರಮದಲ್ಲಿ ಕೆ.ವಿ.ಕೆ. ಯ ವಿಜ್ಞಾನಿಗಳಾದ ಡಾ. ಶಿವಕುಮಾರ, ಆರ್., ಡಾ. ಚೇತನ, ಎನ್., ಡಾ. ಮಲ್ಲಿಕಾರ್ಜುನ್, ಎಲ್. ಮತ್ತು ಡಾ. ರಶ್ಮಿ ರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕೆ.ವಿ.ಕೆ. ಯ ಪ್ರಮುಖ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿಯ ಜೊತೆಗೆ, ಜಿಲ್ಲೆಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳಲ್ಲಿ ಕಂಡು ಬರುವ ಕೀಟ ಮತ್ತು ರೋಗಗಳ ಗುರುತಿಸುವಿಕೆ ಮತ್ತು ನಿರ್ವಹಣೆ, ಜೈವಿಕ ಸೂಕ್ಷ್ಮಜೀವಿಗಳ ಉತ್ಪಾದನೆ, ಅಣಬೆ ಕೃಷಿ, ಜೇನು ಕೃಷಿ, ಮೌಲ್ಯವರ್ಧನೆ, ಎರೆಹುಳು ಗೊಬ್ಬರ ತಯಾರಿಕೆ, ಕಾಳು ಮೆಣಸು, ಮಲ್ಲಿಗೆ ಮತ್ತು ಮಾವು ಬೆಳೆಯ ಸಸ್ಯಾಭಿವೃದ್ಧಿ, ಸ್ವಚ್ಛ ಹಾಲು ಕರೆಯುವಿಕೆ ಮತ್ತು ಸೋಲಾರ್ ಮೀನು ಒಣಗಿಸುವಿಕೆ ಕುರಿತು ತರಬೇತಿಯನ್ನು ನೀಡಲಾಯಿತು. ದೇಸಿ ವಿದ್ಯಾರ್ಥಿಗಳ ಜೊತೆಗೆ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕೆ.ವಿ.ಕೆ.ಯ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ಟಿ. ಜೆ. ರಮೇಶ ರವರು ಸಂಸ್ಥೆಯ ಕಾರ್ಯಚಟುವಟಿಕೆಗಳ ಕುರಿತು ಮತ್ತು ವೃತ್ತಿಪರ ಕೋರ್ಸುಗಳ ಕುರಿತು ಮಾಹಿತಿಯನ್ನು ನೀಡಿದರು.



## ಕಾಳು ಮೆಣಸು ಮತ್ತು ಅಪ್ಪೆ ಮಿಡಿ ಮಾವು ಬೆಳೆಯಲ್ಲಿ ಸುಧಾರಿತ ಬೆಳೆ ಪದ್ಧತಿಗಳ ತರಬೇತಿ ಕಾರ್ಯಕ್ರಮ

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ (ದಕ್ಷಿಣ ಕನ್ನಡ), ತೋಟಗಾರಿಕೆ ಇಲಾಖೆ ಬೆಳ್ತಂಗಡಿ, ಕೃಷಿ ಇಲಾಖೆ ಮತ್ತು ಜಲಾನಯನ ಇಲಾಖೆ ಇವರುಗಳ ಸಹಭಾಗಿತ್ವದಲ್ಲಿ ದಿನಾಂಕ 23.08.2022 ರಂದು ಕಳಿಯಾ ಗ್ರಾಮ ಪಂಚಾಯತ್ ಸಭಾಭವನದಲ್ಲಿ “ಕಾಳು ಮೆಣಸು ಮತ್ತು ಅಪ್ಪೆ ಮಿಡಿ ಮಾವು ಬೆಳೆಯಲ್ಲಿ ಸುಧಾರಿತ ಬೆಳೆ ಪದ್ಧತಿಗಳು, ಇಲಾಖೆಯ ವಿವಿಧ ಯೋಜನೆಗಳು ಹಾಗೂ ಪೌಷ್ಟಿಕ ತೋಟಗಳ ಬಗ್ಗೆ ತರಬೇತಿ ಕಾರ್ಯಕ್ರಮವವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ಮತ್ತು ಉದ್ಘಾಟನೆಯನ್ನು ಶ್ರೀಮತಿ ಸುಭಾಷಿಣಿ, ಕೆ., ಗ್ರಾಮ ಪಂಚಾಯತ ಅಧ್ಯಕ್ಷರು, ಕಳಿಯ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಕಳಿಯ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಶ್ರೀಮತಿ ಕುಸುಮಾ, ಗ್ರಾಮ ಪಂಚಾಯತ್ ಸದಸ್ಯರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ಸಂತೋಷ ಪಾಟೀಲ ರವರು ಭಾಗವಹಿಸಿದರು. ಡಾ. ಕೇದಾರನಾಥ ವಿಜ್ಞಾನಿಗಳು ಕೆ.ವಿ.ಕೆ. ಮಂಗಳೂರು ರವರು “ಕಾಳು ಮೆಣಸು ಮತ್ತು ಅಪ್ಪೆ ಮಿಡಿ ಮಾವು ಬೆಳೆಯಲ್ಲಿ ಸುಧಾರಿತ ಬೆಳೆ ಪದ್ಧತಿಗಳ ಕುರಿತು ಮಾಹಿತಿಯನ್ನು ನೀಡಿದರು. ಶ್ರೀ ಚಂದ್ರಶೇಖರ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಬೆಳ್ತಂಗಡಿ ಮತ್ತು ಶ್ರೀ ಮಹಾವೀರ ಮತ್ತು ಶ್ರೀ ಬಸವರಾಜ ಬೀರಾದಾರ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಬೆಳ್ತಂಗಡಿ, ಕೃಷಿ ಮತ್ತು ಜಲಾನಯನ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.



## ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ

ಭಾ. ಕೃ. ಅ. ಪ.– ಕೃಷಿ ವಿಜ್ಞಾನ ಕೇಂದ್ರ (ದಕ್ಷಿಣ ಕನ್ನಡ), ಮಂಗಳೂರು, ಶಿಕ್ಷಣ ಇಲಾಖೆ, ಜಿಲ್ಲಾ ಪಂಚಾಯತ್ (ದಕ್ಷಿಣ ಕನ್ನಡ), ತೋಟಗಾರಿಕೆ ಇಲಾಖೆ ಮತ್ತು ಭಾರತೀಯ ವಿಕಾಸ ಟ್ರಸ್ಟ್, ಮಣಿಪಾಲ ಸಹಯೋಗದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ಅಕ್ಷರ ದಾಸೋಹ ಅಭಿಯಾನದಡಿಯಲ್ಲಿ 27–07–2022 ರಂದು ಶ್ರೀ ರಾಮ ಪ್ರಾಥಮಿಕ ಶಾಲಾ, ಕಲ್ಲಡ್ಕದಲ್ಲಿ ಆಯೋಜಿಸಲಾಗಿತ್ತು. ಶ್ರೀ ರಾಮ ಪ್ರಾಥಮಿಕ ಶಾಲೆಯ ಸಂಸ್ಥಾಪಕ ಶ್ರೀ. ಕಲ್ಲಡ್ಕ ಪ್ರಭಾಕರ್ ಭಟ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ಕಾರ್ಯಕ್ರಮವನ್ನು ಸಂಯೋಜಿಸಿ ಕೈತೋಟದ ಪ್ರಾಮುಖ್ಯತೆಯನ್ನು ತಿಳಿಸಿಕೊಟ್ಟರು ಮತ್ತು ಕೈತೋಟದ ನಿರ್ಮಾಣ ಒಂದು ಕಲೆ, ಇದೊಂದು ಉತ್ತಮ ಹವ್ಯಾಸವೂ ಹೌದು ಇದನ್ನು ಅತ್ಯಂತ ಕಡಿಮೆ ವೆಚ್ಚ ಹಾಗೂ ಶ್ರಮದಿಂದ ಮಾಡಿದರೆ ಹೆಚ್ಚು ಪ್ರತಿಫಲ ಕೊಡುತ್ತದೆ. ಕಡಿಮೆ ಖರ್ಚಿನಲ್ಲಿ ಸ್ವಲ್ಪ ಸ್ಥಳಾವಕಾಶದಲ್ಲಿ ಉತ್ಕೃಷ್ಟ ಮತ್ತು ಅಧಿಕ ಪೌಷ್ಠಿಕತೆಯ ತರಕಾರಿಗಳ ಉತ್ಪಾದನೆ ಬಹಳ ಮಹತ್ವವೆನಿಸಿಕೊಂಡಿದೆ. ಶ್ರೀಮತಿ. ಉಷಾ, ವಿಶೇಷಾಧಿಕಾರಿ, ಅಕ್ಷರ ದಾಸೋಹ, ಶಿಕ್ಷಣ ಇಲಾಖೆ, ದಕ್ಷಿಣ ಕನ್ನಡ ಅತಿಥಿಗಳನ್ನು ಸ್ವಾಗತಿಸಿ, ಡಾ. ಜೀನೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಬಂಟ್ವಾಳ ಇವರು ವಂದಿಸಿದರು. ಬಂಟ್ವಾಳ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶ್ರೀ. ಪ್ರದೀಪ್ ಡಿಸೋಜ ಅವರು ತೋಟಗಾರಿಕೆ ಇಲಾಖೆಯಲ್ಲಿ ಪೌಷ್ಠಿಕ ಕೈತೋಟ ನಿರ್ಮಾಣಕ್ಕೆ ಸರಕಾರದ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ. ಜೀವನ್, ಕಾರ್ಯಕ್ರಮ ಸಂಯೋಜಕರು, ಬಿವಿಟಿ ಸಂಸ್ಥೆ, ಮಣಿಪಾಲ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ 83 ಶಾಲೆಗಳ 193 ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಶ್ರೀ ರಾಮ ಪ್ರಾಥಮಿಕ ಶಾಲಾ, ಕಲ್ಲಡ್ಕದ ಸಿಬ್ಬಂದಿಗಳು ಭಾಗವಹಿಸಿದ್ದರು





## ವಿದ್ಯಾರ್ಥಿಗಳಿಗೆ ದೃಷ್ಟಿಕೋನ ಕಾರ್ಯಕ್ರಮ

ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ದಿನಾಂಕ 21–07–2022 ರಂದು ಮಂಗಳೂರು ವಿಶ್ವವಿದ್ಯಾಲಯದ ಬಿಎಸ್ಸಿ ವಿದ್ಯಾರ್ಥಿಗಳಿಗೆ ಕೃಷಿ ಮತ್ತು ಕೃಷಿ ಸಂಬಂಧಿತ ವಲಯದಲ್ಲಿ ವೃತ್ತಿ ಅವಕಾಶಗಳು, ತೋಟಗಾರಿಕಾ ಬೆಳೆಗಳ ವ್ಯಾಪ್ತಿ, ಪ್ರಾಮುಖ್ಯತೆ ಮತ್ತು ಕೃಷಿ ವಿಜ್ಞಾನ ಕೇಂದ್ರ, ಮಂಗಳೂರಿನಲ್ಲಿ ಕೈಗೊಂಡಿರುವ ತೋಟಗಾರಿಕೆ ಆಧಾರಿತ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಡಾ. ನಾಗರತ್ನ, ಪ್ರಾಧ್ಯಾಪಕಿ ಮತ್ತು ಎನ್. ಎಸ್. ಎಸ್. ಘಟಕದ ಸಂಯೋಜಕಿ, ವಿಶ್ವವಿದ್ಯಾಲಯದ ಸಿಬ್ಬಂದಿ ಹಾಗೂ 62 ವಿದ್ಯಾರ್ಥಿಗಳು ಭಾಗವಹಿಸಿದ್ದರು.





## ಭೌಗೋಳಿಕವಾಗಿ ಸೂಚಿಸಲಾದ ಉಡುಪಿ ಮಲ್ಲಿಗೆ ಕೃಷಿಯ ಕಾರ್ಯಾಗಾರ

ತೋಟಗಾರಿಕೆ ಇಲಾಖೆ, ದಕ್ಷಿಣ ಕನ್ನಡ ರವರು 03–07–2022 ರಂದು ಕಟೀಲು ಶ್ರೀ. ದುರ್ಗಾ ಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ಉಡುಪಿ ಮಲ್ಲಿಗೆ ಕೃಷಿ ಕಾರ್ಯಗಾರವನ್ನು ಆಯೋಜಿಸಲಾಗಿತ್ತು. ಮೂಡುಬಿದಿರೆ ಕ್ಷೇತ್ರದ ಶಾಸಕರಾದ ಶ್ರೀ ಉಮಾನಾಥ ಕೋಟ್ಯಾನ್ ಕಾರ್ಯಕ್ರಮವನ್ನು ಉದ್ಘಾಟಿಸಿ, ತಮ್ಮ ಉದ್ಘಾಟನಾ ಭಾಷಣದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಉಡುಪಿ ಮಲ್ಲಿಗೆ ಕೃಷಿಗೆ ಹೆಸರುವಾಸಿಯಾಗಿದೆ ಎರಡೂ ಜಿಲ್ಲೆಗಳ ರೈತರು ಆದಾಯವನ್ನು ಹೆಚ್ಚಿಸಲು ಮತ್ತು ಸುಸ್ಥಿರ ಜೀವನ ನಡೆಸಲು ತೋಟಗಾರಿಕೆ ಇಲಾಖೆಯ ಯೋಜನೆಗಳ ಪ್ರಯೋಜನವನ್ನು ಮತ್ತು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಿಂದ ಮಾಹಿತಿಯನ್ನು ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಕಟೀಲು ದುರ್ಗಾ ಪರಮೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕರು ಮಾತನಾಡಿ ಮಲ್ಲಿಗೆ ಕೃಷಿಯು ಲಾಭದಾಯಕ ಬೆಳೆಯಾಗಿದೆ ಮತ್ತು ಮಲ್ಲಿಗೆ ವಿಶಿಷ್ಟವಾದ ಸುವಾಸನೆ ಮತ್ತು ನೆಚ್ಚಿನ ಹೂವುಗಳಿಗೆ ಹೆಸರುವಾಸಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಉಡುಪಿ ಮಲ್ಲಿಗೆಯ ಪ್ರಾಮುಖ್ಯತೆ, ಬೇಸಾಯ ಕ್ರಮಗಳು ಮತ್ತು ಸವರುವಿಕೆ ಮಾಡುವ ಸಮಯದ ಕುರಿತು ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆಯ ವತಿಯಿಂದ 2000 ಮಲ್ಲಿಗೆ ಸಸಿಗಳನ್ನು ರೈತರಿಗೆ ವಿತರಿಸಲಾಯಿತು. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶ್ರೀ. ಪ್ರವೀಣ್ ರವರು ಅತಿಥಿಗಳನ್ನು ಸ್ವಾಗತಿಸಿ, ಶ್ರೀ. ಯುಗೇಂದ್ರ ಸಹಾಯಕ ತೋಟಗಾರಿಕೆ ಅಧಿಕಾರಿ ವಂದಿಸಿದರು. ಕಾರ್ಯಕ್ರಮದಲ್ಲಿ. ಡಾ. ಸಜನ ಎಸ್. ಸಹಾಯಕ ತೋಟಗಾರಿಕೆ ಅಧಿಕಾರಿ, ಪ್ರಗತಿಪರ ರೈತರು, 225 ಮಲ್ಲಿಗೆ ಬೆಳೆಗಾರರು, ರೈತ ಮಹಿಳೆಯರು ಉಪಸ್ಥಿತರಿದ್ದರು.






## ವಿಶ್ವ ತೆಂಗು ದಿನಾಚರಣೆ-2022

ಭಾ. ಕೃ. ಅ. ಪ.– ಕೃಷಿ ವಿಜ್ಞಾನ ಕೇಂದ್ರ (ದಕ್ಷಿಣ ಕನ್ನಡ), ಮಂಗಳೂರು ವತಿಯಿಂದ 02–09–2022 ರಂದು ವಿಶ್ವ ತೆಂಗು ದಿನವನ್ನು ಆಯೋಜಿಸಲಾಗಿತ್ತು. ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಟಿ. ಜೆ. ರಮೇಶರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು ಮತ್ತು ತಮ್ಮ ಉದ್ಘಾಟನಾ ಭಾಷಣದಲ್ಲಿ “ಉತ್ತಮ ಭವಿಷ್ಯಕ್ಕಾಗಿ ಮತ್ತು ಜೀವನಕ್ಕಾಗಿ ತೆಂಗನ್ನು ಬೆಳೆಯುವುದು ಎಂದು ವಿಶ್ವ ತೆಂಗು ದಿನಾಚರಣೆಯ–2022 ಮಹತ್ವವನ್ನು ತಿಳಿಸಿಕೊಟ್ಟರು. ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ಕಾರ್ಯಕ್ರಮವನ್ನು ಸಂಯೋಜಿಸಿ ತೆಂಗು 'ಕಲ್ಪವೃಕ್ಷ' ವೆನಿಸಿಕೊಂಡಿರುವ ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಗಳಲ್ಲೊಂದು. ಇದು ಆಹಾರ (ಎಣ್ಣೆ), ಒಣಕೊಬ್ಬರಿ, ಪಾನೀಯ ಮತ್ತು ಉರುವಲು ವಸ್ತುಗಳನ್ನು ಒದಗಿಸುವುದಲ್ಲದೇ ಹಲವಾರು ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥಗಳನ್ನು ಒದಗಿಸುವುದು. ತೆಂಗು ಕೃಷಿಕರ ಆರ್ಥಿಕ ಮತ್ತು ಸಾಮಾಜಿಕ ಆರ್ಥಿಕ ಮತ್ತು ಸಾಮಾಜಿಕ ಸುಭದ್ರತೆ ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ ಎಂದು ತಿಳಿಸಿಕೊಟ್ಟರು. ಡಾ. ಶಿವಕುಮಾರ್ ಆರ್. ಸಹಾಯಕ ಪ್ರಾಧ್ಯಾಪಕರು (ಪಶು ವಿಜ್ಞಾನ), ಡಾ. ಕೇದಾರನಾಥ ವಿಜ್ಞಾನಿ, (ಸಸ್ಯ ಸಂರಕ್ಷಣೆ) ಮತ್ತು ಡಾ. ಮಲ್ಲಿಕಾರ್ಜುನ ಎಲ್. (ಮಣ್ಣು ವಿಜ್ಞಾನಿ), ಕುಮಾರಿ. ವಿಜೀತ, ದೇಸಿ ಸಂಚಾಲಕರು, 40 ಪರಿಕರ ಮಾರಾಟಗಾರರು ಮತ್ತು ತೋಟಗಾರಿಕೆ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





## ಪರಿಶಿಷ್ಟ ಜಾತಿ ರೈತರಿಗೆ ಪೌಷ್ಠಿಕ ಕೈತೋಟ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ

ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಅಂಗ ಸಂಸ್ಥೆಯಾದ ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ. ಮಂಗಳೂರು ವತಿಯಿಂದ ಪರಿಶಿಷ್ಟ ಜಾತಿ ರೈತರಿಗೆ ಪೌಷ್ಠಿಕ ಕೈತೋಟ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ಭಾ. ಕೃ. ಅ. ಪ.– ಸಿ.ಪಿ.ಸಿ. ಆರ್. ಐ. ಕಾಸರಗೋಡಿನ ಎಸ್‌ಸಿಎಸ್‌ಪಿ ಕಾರ್ಯಕ್ರಮದಡಿಯಲ್ಲಿ ದಿನಾಂಕ: 09–09–2022 ಮತ್ತು 12–09–2022 ರಂದು ಕ್ರಮವಾಗಿ ಮೂಡುಬಿದಿರೆ ಮತ್ತು ಪುತ್ತೂರು ತಾಲ್ಲೂಕುಗಳ ದರೆಗುಡ್ಡ, ಪನಪಿಲ, ನೆಲ್ಲಿಕಾರು ಮತ್ತು ಹಿರೇಬಂಡಾಡಿ ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿತ್ತು.

ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು ಡಾ. ಟಿ. ಜೆ. ರಮೇಶರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಡಾ. ರಶ್ಮಿ ಆರ್. ರವರು ಕಾರ್ಯಕ್ರಮವನ್ನು ಸಂಯೋಜಿಸಿ ಕೈತೋಟದ ಪ್ರಾಮುಖ್ಯತೆ ಮತ್ತು ಕಡಿಮೆ ಖರ್ಚಿನಲ್ಲಿ ಸ್ವಲ್ಪ ಸ್ಥಳಾವಕಾಶದಲ್ಲಿ ಉತ್ಕೃಷ್ಟ ಮತ್ತು ಅಧಿಕ ಪೌಷ್ಠಿಕತೆಯ ತರಕಾರಿಗಳ ಉತ್ಪಾದನೆ ಬಹಳ ಮಹತ್ವವೆನಿಸಿಕೊಂಡಿದೆ ಎಂದು ತಿಳಿಸಿಕೊಟ್ಟರು. ಭಾ. ಕೃ. ಅ. ಪ.– ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರು ಇವರಿಂದ ಪೂರೈಕೆಯಾದ ತರಕಾರಿ ಬೀಜಗಳನ್ನು ಆಯ್ದ 114 ಪರಿಶಿಷ್ಟ ಜಾತಿ ರೈತರಿಗೆ ನೀಡಲಾಯಿತು. ಡಾ. ಮಲ್ಲಿಕಾರ್ಜುನ ಎಲ್., ವಿಜ್ಞಾನಿ (ಮಣ್ಣು ವಿಜ್ಞಾನ), ಸಂಜೀವಿನಿ ಕಾರ್ಯಕ್ರಮ ಸಂಯೋಜಕರಾದ ಶ್ರೀ. ಸುಬ್ರಮಣಿ, ಶ್ರೀ. ಲತೀಶ್ ಮತ್ತು ಶ್ರೀ. ಸಾಯಿಕುಮಾರ್., ಸಹಾಯಕ ತಾಂತ್ರಿಕ ಅಧಿಕಾರಿ, ಉಪ್ಪಿನಂಗಡಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





## ಕೃಷಿ ವಿಜ್ಞಾನ ಕೇಂದ್ರದಲ್ಲಿ ರಾಷ್ಟ್ರೀಯ ಪೋಷಣ ಅಭಿಯಾನ-2022 ಮತ್ತು ಸಸಿ ನೆಡುವ ಕಾರ್ಯಕ್ರಮ

ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ. ಮಂಗಳೂರು ಮತ್ತು ಇಫ್ಕೋ ಸಂಸ್ಥೆಯ ಸಹಯೋಗದಲ್ಲಿ 17–09–2022 ರಂದು ರಾಷ್ಟ್ರೀಯ ಪೋಷಣ ಅಭಿಯಾನ 2022 ಮತ್ತು ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ದಕ್ಷಿಣ ಕನ್ನಡ ಮೇಲ್ವಿಚಾರಕಿಯಾದಂತ ಶ್ರೀಮತಿ. ಶಂಕರಿಯವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು ಡಾ. ಟಿ. ಜೆ. ರಮೇಶ ರವರು ಪೌಷ್ಠಿಕಾಂಶಭರಿತ ಆಹಾರದ ಬಗ್ಗೆ ಜಾಗೃತಿ ಮೂಡಿಸಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ತಾಲ್ಲೂಕು ಸ್ತ್ರೀ ಶಕ್ತಿ ಬಳಗದ ಅಧ್ಯಕ್ಷರಾದಂತ ಶ್ರೀಮತಿ. ಹರಿಣಿ ಭಾಗವಹಿಸಿದರು.

ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ಕೈತೋಟದ ಪ್ರಾಮುಖ್ಯತೆ ಮತ್ತು ಜೈವಿಕ ಬಲವರ್ಧಿತ ತಳಿಗಳು ಮತ್ತು ಸಿರಿಧ್ಯಾನಗಳ ಪಾತ್ರದ ಬಗ್ಗೆ ಅರಿವು ಮೂಡಿಸಿದರು. ಕೃಷಿ ವಿಜ್ಞಾನ ಕೇಂದ್ರದ ಕುಮಾರಿ. ವಿಜಿತ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ 100 ತರಕಾರಿ ಬೀಜಗಳ ಪ್ಯಾಕೆಟ್, 15 ಪಪಾಯ ಸಸಿಗಳನ್ನು ಇಫ್ಕೋ ವತಿಯಿಂದ ವಿತರಿಸಿ ಮತ್ತು ತೆಂಗಿನ ಸಸಿ ನೆಡುವ ಮೂಲಕ ಪೋಷಣ ಅಭಿಯಾನ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು. ಕಾರ್ಯಕ್ರಮದಲ್ಲಿ 142 ಅಂಗನವಾಡಿ ಕಾರ್ಯಕರ್ತೆಯರು, ಕೃಷಿಕರು, ರೈತ ಮಹಿಳೆಯರು, ಪರಿಕರ ಮಾರಾಟಗಾರರು, ಮತ್ತು ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿಗಳು ಉಪಸ್ಥಿತರಿದ್ದರು.





## ಟೊಮೆಟೊ ಮತ್ತು ಪಪಾಯ ಹಣ್ಣುಗಳ ಮೌಲ್ಯವರ್ಧನೆ

ರಾಷ್ಟ್ರೀಯ ಕೃಷಿ ವಿಸ್ತರಣಾ ನಿರ್ವಹಣಾ ಸಂಸ್ಥೆಯ (MANAGE) ಹೈದರಾಬಾದ್ ಪ್ರಾಯೋಜಿತ ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೊಮೊ ಶಿಬಿರಾರ್ಥಿಗಳಿಗೆ ಟೊಮೆಟೊ ಕೆಚಪ್ ಮತ್ತು ಪಪಾಯ ಟೂಟಿ ಫ್ರೂಟಿ ತಯಾರಿಕೆ ಪದ್ಧತಿ ಪ್ರಾತ್ಯಕ್ಷಿಕೆಯನ್ನು ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರಿನಲ್ಲಿ ದಿನಾಂಕ 24–09–2022 ರಂದು ಹಮ್ಮಿಕೊಳ್ಳಲಾಗಿತ್ತು.

ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ತೋಟಗಾರಿಕೆ ಬೆಳೆಗಳಲ್ಲಿ ಕೊಯ್ಲೋತ್ತರ ನಿರ್ವಹಣೆ, ಹಣ್ಣು ಮತ್ತು ತರಕಾರಿಗಳ ಮೌಲ್ಯವರ್ಧಿತ ಉತ್ಪನ್ನಗಳ ಕುರಿತು ಉಪನ್ಯಾಸವನ್ನು ನೀಡಿ ಮತ್ತು ಶಿಬಿರಾರ್ಥಿಗಳಿಗೆ ಟೊಮೆಟೊ ಕೆಚಪ್ ಮತ್ತು ಪಪಾಯ ಟೂಟಿ ಫ್ರೂಟಿ ತಯಾರಿಕೆ ಪದ್ಧತಿ ಪ್ರಾತ್ಯಕ್ಷಿಕೆಯನ್ನು ನೀಡಿದರು. ಡಾ. ಕೇದಾರನಾಥ, ವಿಜ್ಞಾನಿ (ಸಸ್ಯ ಸಂರಕ್ಷಣೆ) ಕಾರ್ಯಕ್ರಮವನ್ನು ಸಂಯೋಜಿಸಿದರು. ಕಾರ್ಯಕ್ರಮದಲ್ಲಿ ಕುಮಾರಿ ವಿಜೀತ, ದೇಸಿ ಸಂಚಾಲಕರು ಮತ್ತು 38 ಕೃಷಿ ಪರಿಕರ ಮಾರಾಟಗಾರರು ಮತ್ತು ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿಗಳು ಉಪಸ್ಥಿತರಿದ್ದರು.






## ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳು

ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ವಿಸ್ತರಣಾ ಶಿಕ್ಷಣ ಸಂಸ್ಥೆ (ದಕ್ಷಿಣ ಪ್ರದೇಶ), ರೈತರ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ ಮತ್ತು ಪ್ರೊ. ಜಯಶಂಕರ್ ತೆಲಂಗಾಣ ರಾಜ್ಯ ಕೃಷಿ ವಿಶ್ವವಿದ್ಯಾಲಯ, ಹೈದರಾಬಾದ್ ರವರು ಆಯೋಜಿಸಿದಂತ "ಕೃಷಿ ಮತ್ತು ಸಂಬಂಧಿತ ವಲಯಗಳ ಮಹಿಳಾ ಅಧಿಕಾರಿಗಳಿಗೆ ಉದ್ಯಮಶೀಲತೆ ಅಭಿವೃದ್ಧಿ" ಎಂಬ ಶೀರ್ಷಿಕೆಯಡಿಯಲ್ಲಿ ದಿನಾಂಕ 14 ರಿಂದ 18 ಜೂನ್ 2022 ವರೆಗೆ ಹಮ್ಮಿಕೊಂಡ ಐದು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು



## ಕರಾವಳಿ ಪ್ರದೇಶದಲ್ಲಿ ಮೇಕೆಗಳ ಉತ್ಪಾದನಾ ಸಾಮರ್ಥ್ಯದ ಮೇಲೆ ಖನಿಜ ಮಿಶ್ರಣದ ಪ್ರಭಾವದ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ

ಭಾರತೀಯ ಕೃಷಿ ಅನುಸಂಧಾನ ಪರಿಷತ್ ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ಇವರ ವತಿಯಿಂದ ದಿನಾಂಕ 01.09.2022 ರಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಕಾಜೂರೂ ಗ್ರಾಮದಲ್ಲಿ ಮೇಕೆ ಸಾಕಾಣಿಕೆ ಮಾಡುವ ರೈತರಿಗೆ ಹಾಗೂ ರೈತ ಮಹಿಳೆಯರಿಗೆ ಕರಾವಳಿ ಪ್ರದೇಶದಲ್ಲಿ ಮೇಕೆಗಳ ಉತ್ಪಾದನಾ ಸಾಮರ್ಥ್ಯದ ಮೇಲೆ ಖನಿಜ ಮಿಶ್ರಣದ ಪ್ರಭಾವ ವಿಷಯದಲ್ಲಿ ಒಂದು ದಿನದ ರೈತರ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಡಾ. ಶಿವಕುಮಾರ್, ಆರ್., ಸಹಾಯಕ ಪ್ರಾಧ್ಯಾಪಕರು, (ಪ್ರಾಣಿ ವಿಜ್ಞಾನ) ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ಇವರು ಕಾರ್ಯಕ್ರಮವನ್ನು ಸಂಯೋಜಿಸಿದ್ದು, ಮೇಕೆಗಳಿಗೆ ಸಣ್ಣ ಪ್ರಾಣಿಗಳಲ್ಲಿ ಬಳಸುವ ಖನಿಜ ಮಿಶ್ರಣಗಳನ್ನು ಉಪಯೋಗಿಸುವುದರಿಂದ ಆಗುವ ಲಾಭಗಳ ಬಗ್ಗೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಡಾ. ಮಲ್ಲಿಕಾರ್ಜುನ್, ಎಲ್., ವಿಜ್ಞಾನಿಗಳು (ಮಣ್ಣು ವಿಜ್ಞಾನ) ಇವರು ಹಾಜರಿದ್ದು, ಸುಮಾರು ಇಪ್ಪತ್ತು ಜನ ರೈತರು ಮತ್ತು ರೈತ ಮಹಿಳೆಯರು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.









## ಅಮೂರ್ ಸಾಮಾನ್ಯ ಗೆಂಡೆ ಮೀನು ಕೃಷಿಯ ಕ್ಷೇತ್ರೋತ್ಸವ

ದಕ್ಷಿಣ ಕನ್ನಡದ ಕೃಷಿ ವಿಜ್ಞಾನ ಕೇಂದ್ರವು ಬೆಳುವಾಯಿ ಗ್ರಾಮದಲ್ಲಿ "ಕೃಷಿ ಹೊಂಡಗಳಲ್ಲಿ ಅಮೂರ್ ಸಾಮಾನ್ಯ ಗೆಂಡೆ ಮೀನಿನ ಕೃಷಿ" ಕ್ಷೇತ್ರೋತ್ಸವವನ್ನು ಆಚರಿಸಲಾಯಿತು. ಡಾ.ಚೇತನ್ ಎನ್. ವಿಜ್ಞಾನಿ (ಮೀನುಗಾರಿಕೆ) ಅವರು ಮೀನು ಕೃಷಿಯ ಪ್ರಾಮುಖ್ಯತೆ ಮತ್ತು ಕೃಷಿ ಹೊಂಡಗಳ ಪರಿಣಾಮಕಾರಿ ಬಳಕೆ ಕುರಿತು ವಿವರಿಸಿದರು. ಸಾಮಾನ್ಯ ಗೆಂಡೆ ಸ್ಥಳೀಯ ತಳಿಯಾಗಿದ್ದು, ಮಿಶ್ರ ಮೀನು ಕೃಷಿಯಲ್ಲಿ ಉತ್ತಮ ಇಳುವರಿಯನ್ನು ನೀಡುತ್ತದೆ, ಅಮೂರ್ ಸಾಮಾನ್ಯ ಗೆಂಡೆ ಮೀನು ಏಕತಳಿ ಕೃಷಿಯಲ್ಲಿ ಉತ್ತಮ ಇಳುವರಿಯನ್ನು ನೀಡುತ್ತದೆ ಎಂದು ಪ್ರಾತ್ಯಕ್ಷಿಕೆಗಳ ಮುಖಾಂತರ ರುಜುವಾತಾಗಿದೆ. ಅಮೂರ್ ಸಾಮಾನ್ಯ ಗೆಂಡೆ ಮೀನು ಜಲ ಪರಿಸರದಲ್ಲಿನ ಹಠಾತ್ ಬದಲಾವಣೆಯನ್ನು ತಡೆದುಕೊಳ್ಳುತ್ತದೆ, ಅಲ್ಲದೇ ಶೇ 27 ರಷ್ಟು ವೇಗದ ಬೆಳವಣಿಗೆಯನ್ನು ಹೊಂದುತ್ತದೆ ಮತ್ತು ರೋಗ ನಿರೋಧಕತೆಯನ್ನು ಹೊಂದಿದೆ. ಕಾಟ್ಲಾ, ರೋಹು, ಸಾಮಾನ್ಯ ಗೆಂಡೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಮುಖವಾಗಿ ಬೆಳೆಯುತ್ತಿರುವ ಮೀನಿನ ತಳಿಗಳಾಗಿರುತ್ತವೆ. ವಿವಿಧ ಜಲಮೂಲಗಳಲ್ಲಿ ತಿಲಾಪಿಯಾ ಮತ್ತು ಪಂಗೇಷಿಯಸ್ ಪರ್ಯಾಯ ಜಾತಿಯ ಮೀನಿನ ತಳಿಗಳನ್ನು ಹೆಚ್ಚಿನ ಕೃಷಿಕರು ಮಿಶ್ರ ಮೀನು ಕೃಷಿಯಡಿಯಲ್ಲಿ ಅಧಿಕ ಉತ್ಪಾದನೆಯನ್ನು ಪಡೆಯುತ್ತಿದ್ದಾರೆ.

ಮಿಶ್ರ ಮೀನು ಕೃಷಿಯಲ್ಲಿ ವೈಜ್ಞಾನಿಕ ನಿರ್ವಹಣೆ ಹೆಚ್ಚು ಅವಶ್ಯಕವಾಗಿದೆ ಮತ್ತು ಹೆಚ್ಚಿನ ಕೃಷಿಕರು ಗುಣಮಟ್ಟದ ಮೀನು ಮರಿಗಳು ಮತ್ತು ವೈಜ್ಞಾನಿಕ ಮೀನು ಮರಿಗಳ ಸಂಗ್ರಹಣೆಯನ್ನು ಆಯ್ಕೆಮಾಡುವಲ್ಲಿ ವಿಫಲರಾಗಿದ್ದಾರೆ, ಇದರೊಂದಿಗೆ ಇಳುವರಿಯ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತದೆ.




ಸ್ಥಳೀಯ ತಳಿಗೆ ಹೋಲಿಸಿದರೆ ಅಮೂರ್ ಸಾಮಾನ್ಯ ಗೆಂಡೆ, ಆಕಾರ ಮತ್ತು ರುಚಿಯಿಂದಾಗಿ ಹೆಚ್ಚು ಮಾರುಕಟ್ಟೆ ಮೌಲ್ಯವನ್ನು ಹೊಂದಿದೆ. ದಕ್ಷಿಣ ಕನ್ನಡ ಜಿಲ್ಲೆ ಕರಾವಳಿ ಜಿಲ್ಲೆಯಾಗಿದ್ದು, ಹೆಚ್ಚಿನ ಜನಸಂಖ್ಯೆಯು ಆಹಾರಕ್ಕಾಗಿ ಸಮುದ್ರ ಮೀನುಗಳ ಮೇಲೆ ಅವಲಂಬಿತವಾಗಿದೆ, ಹೆಚ್ಚಿನ ಕೃಷಿ ಹೊಂಡಗಳು ಮೀನು ಕೃಷಿಗೆ ಪರಿಣಾಮಕಾರಿಯಾಗಿ ಬಳಸಲ್ಪಟ್ಟಿಲ್ಲ. ಆಧುನಿಕ ತಂತ್ರಜ್ಞಾನಗಳೊಂದಿಗೆ ಮೀನು ಕೃಷಿಯು ಆರ್ಥಿಕ ಲಾಭ ಮತ್ತು ಗುಣಮಟ್ಟದ ಆಹಾರ ಉತ್ಪಾದನೆಗೆ ಸಮಗ್ರ ವಿಧಾನವಾಗಿದೆ. ಪ್ರಗತಿಪರ ಕೃಷಿಕರಾದ ಶ್ರೀ ರಾಮಕೃಷ್ಣ ಶೆಣೈ ಅವರು ಕೃಷಿ ಹೊಂಡದಲ್ಲಿ ಸಮಗ್ರ ಬೇಸಾಯವನ್ನು ಅಳವಡಿಸಿಕೊಂಡು ಮೀನುಗಾರಿಕೆಯ ಬಗ್ಗೆ ರೈತ ಸಮುದಾಯದೊಂದಿಗೆ ತಮ್ಮ ಅನುಭವವನ್ನು ಹಂಚಿಕೊಂಡರು. ಕೃಷಿ ಮತ್ತು ಬಹು ಬೆಳೆ ಪದ್ಧತಿಯಲ್ಲಿನ ಕೊರತೆಗಳನ್ನು ನಿವಾರಿಸಲು ಸಮಗ್ರ ವಿಧಾನವೇ ಸರಿಯಾದ ವಿಧಾನವಾಗಿದೆ. ಅಮೂರ್ ಗೆಂಡೆ ಮೀನು ಸ್ಥಳೀಯ ಆಹಾರ ಪದಾರ್ಥಗಳನ್ನು ಸ್ವೀಕರಿಸುತ್ತದೆ ಮತ್ತು ಒಂದು ವರ್ಷದಲ್ಲಿ ಸರಾಸರಿ 1.5 ಕೆಜಿ ವರೆಗೆ ಬೆಳೆಯುತ್ತದೆ. ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ಕೃಷಿಕರು ಕ್ಷೇತ್ರೋತ್ಸವ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.




## ಕೃಷಿ ಹೊಂಡಗಳಲ್ಲಿ ಮೀನು ಸಾಕಾಣಿಕೆ ತರಬೇತಿ

ದಕ್ಷಿಣ ಕನ್ನಡದ ಕೆವಿಕೆ, ಬೆಜ್ಜಾ ಜಲಾನಯನ (ನಬಾರ್ಡ್ ಡಬ್ಲ್ಯುಡಿಎಫ್) ಸಹಯೋಗದಲ್ಲಿ ಕೃಷಿ ಹೊಂಡಗಳಲ್ಲಿ ಮೀನು ಸಾಕಣೆ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಬೆಜ್ಜಳ ಜಲಾನಯನ ಸಮಿತಿಯ ಕಾರ್ಯದರ್ಶಿ ಸದಾಶಿವ ರಾವ್ ಕಾರ್ಯಕ್ರಮದ ಉದ್ಘಾಟಕರಾಗಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಕ್ಷಿಣ ಕನ್ನಡದ ಕೆವಿಕೆಯ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ರಮೇಶ ಟಿ.ಜೆ. ವಹಿಸಿದ್ದರು. ಕರಾವಳಿ ಜಿಲ್ಲೆಗಳಲ್ಲಿನ ಕೃಷಿ ಹೊಂಡಗಳನ್ನು ಇಲ್ಲಿಯವರೆಗೆ ಶೇಖರಣಾ ಉದ್ದೇಶಗಳಿಗಾಗಿ ಮಾತ್ರ ಬಳಸಲಾಗುತ್ತಿದೆ. ಆದರೆ, ಜಾಗೃತಿ ಕಾರ್ಯಕ್ರಮಗಳು ಮತ್ತು ಲಭ್ಯವಿರುವ ನೀರಿನ ಸಂಪನ್ಮೂಲಗಳ ಸುಸ್ಥಿರ ಬಳಕೆಯ ಬಗ್ಗೆ ರೈತ ಸಮುದಾಯಕ್ಕೆ ತರಬೇತಿ ನೀಡುವ ಮೂಲಕ, ರೈತ ಸಮುದಾಯವು ಕನಿಷ್ಠ ಉತ್ಪಾದನಾ ವೆಚ್ಚದೊಂದಿಗೆ ಹೆಚ್ಚುವರಿ ಆದಾಯಕ್ಕಾಗಿ ಮೀನು ಕೃಷಿಯನ್ನು ತೆಗೆದುಕೊಳ್ಳಲು ಉತ್ಸುಕವಾಗಿದೆ.

ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ.ರಮೇಶ ಟಿ.ಜೆ ಮಾತನಾಡಿ, ಹೆಚ್ಚಿನ ಹೂಡಿಕೆ ಇಲ್ಲದೆ ಮತ್ತು ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಯಶಸ್ವಿ ಮೀನುಗಾರಿಕೆ ಉದ್ಯಮವನ್ನು ಹೇಗೆ ಅಭಿವೃದ್ಧಿಪಡಿಸಬಹುದು ಎಂಬುದನ್ನು ವಿವರಿಸಿದರು. ಡಾ. ಚೇತನ್ ಎನ್. ವಿಜ್ಞಾನಿ (ಮೀನುಗಾರಿಕೆ) ಅವರು ಕೃಷಿ ಸಮುದಾಯಕ್ಕೆ ನೀರಿನ ಬಳಕೆ, ಮೂಲಭೂತ ಮೀನು ಸಾಕಣೆ ತಂತ್ರಗಳು, ಮೀನು ಮರಿಗಳ ಆಯ್ಕೆ ಮತ್ತು ಸಂಗ್ರಹಣೆ, ಕೃಷಿ ವಿಧಾನಗಳು ಮತ್ತು ಕೃಷಿ ಹೊಂಡಗಳಲ್ಲಿನ ನಿರ್ವಹಣೆಯ ಅಂಶಗಳ ಕುರಿತು ತರಬೇತಿ ನೀಡಿದರು. ಮೀನಿನ ಕೊಳಗಳಲ್ಲಿ ಸುಣ್ಣ ಮತ್ತು ಗೊಬ್ಬರ ಹಾಕುವ ವಿಧಾನದ ಪ್ರಾತ್ಯಕ್ಷಿಕೆಯನ್ನು ನಡೆಸಲಾಯಿತು ಹಾಗೂ ಮೀನು ಬೆಳೆಸುವ ಕೊಳದಿಂದ ನೀರನ್ನು ಶೋಧಿಸುವ ಮುಖಾಂತರ ನೈಸರ್ಗಿಕ ಆಹಾರ ಉತ್ಪಾದನಾ ಮಟ್ಟವನ್ನು ಪರಿಶೀಲಿಸಿದರು ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು ದನದ ಹಸಿ ಸಗಣಿಯೊಂದಿಗೆ ಕೊಳವನ್ನು ಫಲವತ್ತಾಗಿಸುವುದನ್ನು ಪ್ರಾತ್ಯಕ್ಷಿಕೆಯ ಮೂಲಕ ತಿಳಿಸಲಾಯಿತು. ಅಲ್ಲದೇ ನೀರಿನ ರಸಸಾರವನ್ನು ಸರಿಪಡಿಸಲು ಹೊಸ ಕೊಳದಲ್ಲಿ ಸುಣ್ಣವನ್ನು ಹಾಕಲಾಯಿತು. ಈ ಪ್ರಾತ್ಯಕ್ಷಿಕೆಗಳ ಮೂಲಕ ಪ್ರಮುಖ ತತ್ವಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ರೈತರಿಗೆ ಸಹಾಯವಾಯಿತು. ಕೃಷಿ ಹೊಂಡಗಳಲ್ಲಿ ಮೀನುಗಾರಿಕೆಯ ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳು ಮತ್ತು ವಿವರವಾದ ಪರಿಕಲ್ಪನೆಗಳ ಚರ್ಚೆಯೊಂದಿಗೆ ಕಾರ್ಯಕ್ರಮವು ಯಶಸ್ವಿಯಾಯಿತು.



## ತೋಟಗಾರಿಕೆ ಬೆಳೆಗಳಲ್ಲಿ ಕೀಟ ಮತ್ತು ರೋಗ ಲಕ್ಷಣಗಳ ಗುರುತಿಸುವಿಕೆ

ಬೆಳೆಗಳ ಉತ್ಪಾದನೆಯಲ್ಲಿ ಸಸ್ಯ ರೋಗ ಮತ್ತು ಕೀಟಗಳ ನಿರ್ವಹಣೆ ಪ್ರಮುಖ ಪಾತ್ರವಹಿಸುತ್ತದೆ, ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ಕೇದಾರನಾಥ ರವರು ತೆಂಗು, ಅಡಿಕೆ, ಕರಿಮೆಣಸು, ಗೇರು ಮತ್ತು ಮಾವು ಬೆಳೆಗಳಲ್ಲಿ ರೋಗ ಮತ್ತು ಕೀಟ ಬಾಧೆಯ ಲಕ್ಷಣಗಳ ಗುರುತಿಸುವಿಕೆ ಕುರಿತು ಪರಿಕರ ಮಾರಾಟಗಾರರಿಗೆ ದಿನಾಂಕ 22.07.2022 ಮತ್ತು 25.07.2022 ರಂದು ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಒಟ್ಟು 76 ದೇಸಿ ಕೃಷಿ ಪರಿಕರ ಮಾರಾಟಗಾರರು ಭಾಗವಹಿಸಿದರು.











ಸಂಪಾದಕರು : ಡಾ. ಟಿ. ಜೆ. ರಮೇಶ

ಸಹ ಸಂಪಾದಕರು : ಡಾ. ಮಲ್ಲಿಕಾರ್ಜುನ ಎಲ್.

ಸಹಾಯಕ ಸಂಪಾದಕರು : ಡಾ. ಶಿವಕುಮಾರ್ ಆರ್.
ಡಾ. ಚೇತನ್ ಎನ್
ಡಾ. ಕೇದಾರನಾಥ
ಡಾ. ನವೀನ್ ಕುಮಾರ್ ಬಿ. ಟಿ.
ಡಾ. ರಶ್ಮಿ ಆರ್.

ಸಲಹೆ ಮತ್ತು ಮಾರ್ಗದರ್ಶನ : ಡಾ. ಎನ್. ಎ. ಪಾಟೀಲ್

ಪುಟ ವಿನ್ಯಾಸ : ಶ್ರೀ ಸತೀಶ ನಾಯ್ಕ ಕೆ.

ಪ್ರಕಾಶಕರು : ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ,
ಮಂಗಳೂರು – 576102



ಭಾ.ಕೃ.ಅ.ಪ.–ಕೆ.ವಿ.ಕೆ.ದ.ಕ., ಮಂಗಳೂರು ದೂ.ಸಂಖ್ಯೆ : 0824–2431872,
ಮಿಂಚಂಚೆ : kvk.DakshinaKannada@icar.gov.in ವೆಬ್‌ಸೈಟ್:kvkdk.org